of the Corporation and with the help of the Corporation contractors, whether the Hon. Chief Minister is going to set up an enquiry into this matter ?

SRI R. GUNDU RAO.—If the hon. Member has got any reliable information to that effect and if he sends it to the Government, Government will definitely look into it and *prima facie* if it is proved, action will be taken against him.

Reconsideration of Havanur Commission's Report

187 SRI H. GANGADHARAN. (Krishnaraja) —Will the Minister of State for Social Welfare Backward Classes and Women and Children's Welfare be pleased to state.—

(a) whether the present Government intends to reconsider the Havanur Commission's Report.

(b) whether a new Commission will be appointed for considering facilities to be given to Backward Classes and Minorities.

(c) whether it will give priority for economically weaker sections barring the community units ?

SMT. MANORAMA MADHVARAJ (Minister of State for Social Welfare, Backward Classes and Women and Children's Welfare).—

(a) No

(b) No

(c) No

ಶ್ರೀ ಹೆಚ್. ಗಂಗಾಧರನ್.—ಸ್ವಾಮಿ, ಮಾನ್ಯ ಸಚಿವರು ಈ ಪ್ರಶ್ನೆಗಳಿಗೆಲ್ಲಾ ಇಲ್ಲಾ ಎಂದು ಉತ್ತರ ಕೊಡುವುದಕ್ಕಿಂತ ಮುಂಚಿತವಾಗಿ, ಈ ತರಹ ಪ್ರಶ್ನೆ ಬಂದಿದೆ ಇದಕ್ಕೆ ಯಾವ ರೀತಿ ಉತ್ತರ ಕೊಡಬೇಕು ಎನ್ನುವ ಬಗ್ಗೆ ಮುಖ್ಯಮಂತ್ರಿಗಳವರನ್ನು ಏನಾದರೂ ಕೇಳಿದ್ದೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.—ಇಲ್ಲ.

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಮುಖ್ಯಮಂತ್ರಿಗಳವರು ಸಹ ಇಲ್ಲಿಯೇ ಕೂತಿದ್ದಾರೆ, ಅವರು ಒಂದು ಕಡೆ ಭಾಷಣ ಮಾಡುತ್ತಾ ಹೇಳಿದ್ದಾರೆ, ಇದಕ್ಕಿಂತಲೂ ಉತ್ತಮವಾದ ವರದಿಯನ್ನು ತಯಾರು ಮಾಡುತ್ತೇವೆ ಇದರಲ್ಲಿಯೂ ಸಹ ಅನ್ಯಾಯವಾಗಿದೆ ಅದನ್ನು ಸರಿಪಡಿಸುತ್ತೇವೆ ಎನ್ನುವ ಬಗ್ಗೆ ಆಶ್ವಾಸನೆ ಕೊಟ್ಟಿದ್ದಾರೆ. ಅದು ಈ ಸಭೆಯಲ್ಲಿ ಅಲ್ಲ ಹೊರಗಡೆ ಆದುದರಿಂದ ಸರ್ಕಾರದವರ ಧೋರಣೆ ಇದರ ಬಗ್ಗೆ ಏನಾದರೂ ಬದಲಾವಣೆಯಾಗಿದೆಯೇ ? ಆ ರೀತಿ ಬದಲಾವಣೆ ಮಾಡತಕ್ಕದರ ಬಗ್ಗೆ ಮುಖ್ಯಮಂತ್ರಿಗಳವರೇ ಭರವಸೆ ಕೊಟ್ಟಿರುವುದರಿಂದ ಈಗ ಸರ್ಕಾರದವರು ಯಾವ ಯೋಜನೆಯನ್ನು ಹಾಕಿಕೊಂಡಿದ್ದಾರೆ ?

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳವರು ಹೇಳಿಕೆಯನ್ನು ಕೊಟ್ಟಿರುವುದರ ಬಗ್ಗೆಯೇ ಅನೇಕ ಗಮನ ಸೆಳೆಯುವ ಸೂಚನೆಗಳು ಮತ್ತು ಅನೇಕ ಪ್ರಶ್ನೆಗಳು ಬಂದಿವೆ ಅವನ್ನು ಇಲ್ಲಿ ಚರ್ಚೆಗೆ ತೆಗೆದುಕೊಂಡ ಕಾಲದಲ್ಲಿ ಉತ್ತರ ಕೊಡುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಆರ್ಥಿಕವಾಗಿ ಹಿಂದುಳಿದವರಿಗೆ ಆದ್ಯತೆ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಆರ್ಥಿಕವಾಗಿ ಹಿಂದುಳಿದಿರುವವರ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿ ಇಲ್ಲವೇ, ಅವರಿಗೆ ಏನಾದರೂ ಸಹಾಯ ಮಾಡಬೇಕು ಎನ್ನುತಕ್ಕ ಮನೋಭಾವನೆ ಸರ್ಕಾರಕ್ಕೆ ಇಲ್ಲವೇ ?

ಶ್ರೀಮತಿ ಮನೋರಮಾ ಮಧ್ವರಾಜ್—ಆರ್ಥಿಕವಾಗಿ ಹಿಂದುಳಿದವರಿಗೆ ಸಹಾಯ ಮಾಡ ಬೇಕೆಂಬುದೇ ನಮ್ಮ ಸರ್ಕಾರದ ಉದ್ದೇಶ ಅದಕ್ಕಾಗಿ ಸರ್ಕಾರಿ ಆದೇಶ ಕೂಡ ಇದೆ, ಅದರ ಪ್ರಕಾರ ೧೫ ಪರ್ಸೆಂಟ್ ರಿಜರ್ವೇಷನ್ಸ್ ಸಹ ಅವರಿಗಾಗಿಯೇ ಇಟ್ಟಿದ್ದೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಸ್. ಎ. ಶೀರ್ನಾಳಿ ಚಂದ್ರಶೇಖರ್.—ಅಧ್ಯಕ್ಷರೇ, ಒಬ್ಬ ಗಂಡನನ್ನು ಕಳೆದುಕೊಂಡ ಬ್ರಾಹ್ಮಣ ಹೆಂಗಸು ವಿಧವೆ ಇರುತ್ತಾಳೆ. ಅವರಿಗೆ ಒಬ್ಬನೇ ಮಗನಿದ್ದು ಅವನನ್ನು ಓದಿಸುವುದಕ್ಕಾಗಿ ಅವಳು ಬೇರೆಯವರ ಮನೆಯಲ್ಲಿ ಅಡಿಗೆ ಮಾಡಿಕೊಂಡು, ಚಟ್ನಿ ಪುಡಿ ಕುಟ್ಟಿಕೊಂಡು ಹೇಗೋ ಜೀವನ ಮಾಡಿಕೊಂಡಿರುತ್ತಾಳೆ. ಅಂಥಾ ಹೆಂಗಸನ್ನು ನಿಮ್ಮ ಆಯೋಗದ ವರದಿಯ ಪ್ರಕಾರ ಮುಂದುವರಿದ ಜನಾಂಗಕ್ಕೆ ಸೇರಿಸಿದ್ದೀರಿ. ರಿಜರ್ವೇಷನ್ಸ್ ಇರುವುದಿಲ್ಲ ಆದುದರಿಂದ ಇಂಥಾ ಆರ್ಥಿಕವಾಗಿ ಹಿಂದುಳಿದಿರ ತಕ್ಕ ಜನರ ಸಮಸ್ಯೆಯನ್ನು ಸಹ ಗಮನದಲ್ಲಿಟ್ಟುಕೊಂಡು ಈಗ ಏನು ೧೫ ಪರ್ಸೆಂಟ್ ಇಟ್ಟಿದ್ದೀರಿ ಅದನ್ನು ಇನ್ನು ೫ ಪರ್ಸೆಂಟ್ ಹೆಚ್ಚಿಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಈಗಾಗಲೇ ೧೫ ಪರ್ಸೆಂಟ್ ರಿಜರ್ವೇಷನ್ ಮಾಡಿ ಇಟ್ಟಿದ್ದೇವೆ. ಅಂಥಾದ್ದು ಏನಾದರೂ ಪ್ರಮೇಯ ಬಂದರೆ ಸರ್ಕಾರ ತಮ್ಮ ಸಲಹೆಯನ್ನು ಪರಿ ಶೀಲಿಸುತ್ತದೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಪ್ರಮೇಯ ಬಂದರೆ ಅಂದರೆ ಏನು ? ಇವತ್ತು ನಮ್ಮ ರಾಜ್ಯದಲ್ಲಿ ಬ್ರಾಹ್ಮಣರ ಸಂಖ್ಯೆ ಇರುವುದೇ ೫ ಪರ್ಸೆಂಟ್ ಲಿಂಗಾಯಿತರ ಪರ್ಸೆಂಟ್ ೩೦,೩೫ ಬರ ಬಹುದು, ಇವರನ್ನೆಲ್ಲಾ ಮುಂದುವರಿದ ಜನಾಂಗ ಅಂತ ಮಾಡಿ ಇಟ್ಟಿದ್ದೀರಿ. ಆದುದರಿಂದ ಇನ್ನು ೫ ಪರ್ಸೆಂಟ್ ಜಾಸ್ತಿ ಮಾಡುವುದಕ್ಕೆ ಏನಾದರೂ ಯೋಚನೆ ಮಾಡುತ್ತೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.—ಸರ್ಕಾರ ಅದನ್ನು ಪರಿಶೀಲಿಸುತ್ತದೆ.

ಶ್ರೀ ರಾಮ ಭಟ್.—ಮುಖ್ಯಮಂತ್ರಿಗಳವರು ಒಂದು ಹೇಳಿಕೆ ಕೊಟ್ಟಿದ್ದಾರೆ, ಮತ್ತು ಆಳುವ ಪಕ್ಷದ ಸದಸ್ಯರಾದ ಶ್ರೀ ಭೀಮಣ್ಣ ಖಂಡ್ರಿಯವರು ಹೊಂದಲ್ಲೆಲ್ಲಾ ಒಂದು ಮಾತು ಹೇಳುತ್ತಿದ್ದಾರೆ. ಅದು ಏನೆಂದರೆ ಈ ಆಯೋಗದ ವರದಿಯನ್ನು ರದ್ದು ಮಾಡುತ್ತೇವೆಂದು, ಆದುದರಿಂದ ಆಳುವ ಪಕ್ಷದವರ ಅಭಿಪ್ರಾಯ ಇದರ ಬಗ್ಗೆ ಏನಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ.

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೇ, ಶ್ರೀ ರಾಮಭಟ್ ಮತ್ತು ಶ್ರೀ ಗಂಗಾಧರನ್‌ರವರು ಹೇಳಿದ್ದೇನೋ ನಿಜ. ನಾನು ಇನ್ನು ಹೆಚ್ಚಿನ ರೀತಿಯಲ್ಲಿ ಆರ್ಥಿಕವಾಗಿ ಹಿಂದುಳಿದವರನ್ನು ಗುರುತಿಸಿ ಅವರಿಗೆ ಹೆಚ್ಚಿನ ಸಹಕಾರ ಸೌಲಭ್ಯಗಳನ್ನು ಒದಗಿಸಿ ಕೊಡುವುದಕ್ಕೆ ಸರ್ಕಾರ ಖಂಡಿತ ಪ್ರಯತ್ನ ಮಾಡು ತ್ತೇವೆಂದು ಹೇಳಿದ್ದೇನೆ. ಅದೇ ನಮ್ಮ ಸರ್ಕಾರದ ಉದ್ದೇಶ ಅಂತ ಹೇಳಿದ್ದೇನೆ. ಈಗ ಅವರು ಕೊಟ್ಟಿರುವ ವರದಿಯೇ ಅಂತಿಮವಾದ ವರದಿ ಅಂತ ಹೇಳುವುದಕ್ಕಾಗುವುದಿಲ್ಲ ಆದರಲ್ಲಿಯೂ ಸಹ ಏನಾದರೂ ಇಂಪ್ರೂವ್ ಮಾಡುವುದಕ್ಕೆ ಅವಕಾಶವಿದ್ದರೆ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಎ. ರಾಮಚಂದ್ರ.—ಮಾನ್ಯ ಗಂಗಾಧರನ್‌ರವರು ಹಾವನೂರ್‌ರವರ ವರದಿಯನ್ನು ಪರಿ ಶೀಲಿಸುತ್ತೀರಾ ಎಂದು ಕೇಳಿರುವ ಪ್ರಶ್ನೆಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಯವರು ಇಲ್ಲವೆಂದು ಹೇಳಿದ್ದಾರೆ. ಬಹುಶಃ ಆ ವರದಿಯಲ್ಲಿ ಪಲವಾರು ತಪ್ಪುಗಳಿವೆ. ಅದನ್ನು ಪರಿಶೀಲಿಸುವುದು ಅಗತ್ಯ ವಾಗಿದೆ ಅಂತೆಯೇ ಪರಿಶೀಲಿಸಬೇಕು. ನನಗೆ ತಿಳಿದ ಮಟ್ಟಿಗೆ ಅದರಲ್ಲಿ ಯಾವ ಜಾತಿ ಮುಂದುವರಿದ ಜಾತಿಗಳಾಗಿದೆಯೋ ಅದನ್ನು ಹಿಂದುಳಿದ ಜಾತಿಯೆಂದೂ, ಹರಿಜನರಲ್ಲದವರನ್ನು ಹರಿಜನರೆಂದೂ ನಮೂದಿಸಲಾಗಿದೆ. ಆದ್ದರಿಂದ ಅದನ್ನೂ ಕೂಡ ಪರಿಶೀಲಿಸಬೇಕೆಂದು ಹೇಳುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ಈಗಾಗಲೇ ಕೇಂದ್ರ ಸರ್ಕಾರದವರು ಬ್ಯಾಕ್‌ವರ್ಡ್ ಕ್ಲಾಸ್ ಕಮೀಷನ್ ಎಂದು ಒಂದು ಆಯೋಗವನ್ನು ನೇಮಕ ಮಾಡಿದ್ದಾರೆ. ಏನಾದರೂ ಅಂಥ ಹೆಚ್ಚು ಕಡಿಮೆ ಆಗಿದ್ದಲ್ಲಿ ಅದನ್ನು ಸರ್ಕಾರ ಆ ಆಯೋಗಕ್ಕೆ ಕಳುಹಿಸಿಕೊಟ್ಟು ಸರಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಜೆ ಪೆಚ್. ಪಟೀಲ್.—ಹಾವನೂರ್ ವರದಿಯನ್ನು ಪುನರ್‌ಪರಿಶೀಲನೆ ಮಾಡುವ ಅವಶ್ಯಕತೆ ಕಂಡುಬಂದರೆ ಮಾಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಈಗತಾನೇ ಹೇಳಿದ್ದಾರೆ. ಆಂದಾಗ ಅದನ್ನು ಪುನರ್ ಪರಿಶೀಲನೆ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆ ಎಂಬುದು ಸ್ಪಷ್ಟವಾಯಿತು. ಈ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಜಾತಿ ಆಧಾರದ ಮೇಲೆ ಯಾರು ಹಿಂದುಳಿದಿದ್ದಾರೆಂಬುದನ್ನು ವರದಿಯಲ್ಲಿ ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ಆದರ ಬಗ್ಗೆ ಚರ್ಚೆ ಬರಲಿ ರುವುದರಿಂದ ಅದು ಬಂದಾಗ ಮಾತನಾಡೋಣ ಈಗ ಸಧ್ಯಕ್ಕೆ ಕೇಳತಕ್ಕ ವಿಚಾರವೇನೆಂದರೆ, ಭಾರತದಲ್ಲೇ ಅಲ್ಲ ಇಡೀ ವಿಶ್ವದಲ್ಲೇ ಅತ್ಯಂತ ಹಿಂದುಳಿದ ಜನಾಂಗಕ್ಕೆ ಸೇರಿದವರು ಅಂದರೆ ಮಹಿಳೆಯರು. ಅವರಷ್ಟು ಹಿಂದುಳಿದಿರತಕ್ಕವರು ಬೇರೆ ಯಾರು ಇಲ್ಲ. ಆದ್ದರಿಂದ ಅವರಿಗೆ ಏನಾದರೂ ವಿಶೇಷವಾಗಿ ಪುನರ್ ಪರಿಶೀಲನೆ ಮಾಡುವಾಗ ಇಷ್ಟು ಪರ್ಸೆಂಟೇಜ್ ಎಂದು ರಿಸರ್ವ್ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಮಹಿಳೆಯರು ಹಿಂದುಳಿದಿದ್ದಾರೆ ನಿಜ, ಆದರೆ ಅವರು ಒಂದಲ್ಲ ಒಂದು ಜಾತಿಗೆ ಸೇರಿದವರು ತಾನೆ ? ಆವರಿಗೇನು ಬೇರೆ ಜಾತಿ ಇಲ್ಲ. ಆದ್ದರಿಂದ, ಸಮಗ್ರವಾಗಿ ಪರಿಶೀಲನೆ ಮಾಡುವಾಗ ಮಹಿಳೆಯರಿಗೆ, ಮಹನೀಯರಿಂದ ಬೇರೆ ಮಾಡಬಹುದೇ ಎಂಬುದನ್ನು ನೋಡೋಣ.

ಶ್ರೀ ಕೆ. ಬಿ. ಶಿವಮೂರ್ತಿ.—ಹಾವನೂರು ವರದಿಯಲ್ಲಿ ಲೋಪ ದೋಷಗಳಿವೆ ಎಂಬುದು ಸರ್ಕಾರಕ್ಕೆ ಖಚಿತವಾಗಿದೆಯೇ ? ಹಾಗಿದ್ದರೆ, ಅದನ್ನು ಸರಿಪಡಿಸುವ ಸಲುವಾಗಿ ತಜ್ಞರ ಸಮಿತಿಯನ್ನು ನೇಮಿಸಿ ಆದಷ್ಟು ಬೇಗ ಆ ವರದಿಯನ್ನು ಬದಲಾಯಿಸುವುದಕ್ಕೆ ಸರ್ಕಾರ ಆಲೋಚಿಸುತ್ತದೆಯೇ ?

ಶ್ರೀ ಆರ್. ಗುಂಡೂರಾವ್.—ಆ ಪ್ರಶ್ನೆ ಉದ್ಭವವಾಗುವುದಿಲ್ಲ. ನಾನು ಈಗಾಗಲೇ ಸ್ಪಷ್ಟ ಪಡಿಸಿದ್ದೇನೆ, ಎಲ್ಲೆಲ್ಲಿ ಯಾವ್ಯಾವ ಜಾತಿಗಳು ಆರ್ಥಿಕವಾಗಿ ಹಿಂದುಳಿದಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಾಗ ಇನ್ನೊಂದು ವರದಿಯನ್ನು ಮಾಡಬೇಕಾಗಿಲ್ಲ ಅಂಥದ್ದು ಏನಾದರೂ ಹೊಸದಾಗಿ ಸರ್ಕಾರದ ಗಮನಕ್ಕೆ ಬಂದಾಗ ನೋಡೋಣ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾನ್ಯ ಹಣಕಾಸಿನ ಮಂತ್ರಿಯವರ ಜಾತಿ ಏನಿದೆ ಅದು ಬಹಳ ಹಿಂದುಳಿದ ಜಾತಿ. ಅದನ್ನು ಹಾವನೂರು ವರದಿಯಲ್ಲಿ ಸೇರಿಸಿಲ್ಲ. ಅದೇ ರೀತಿ ಹಲವಾರು ಜಾತಿಗಳನ್ನು ಸೇರಿಸಿಲ್ಲ. ಆರ್ಥಿಕವಾಗಿ ಹಿಂದುಳಿದವರನ್ನು ಹಿಂದುಳಿದ ವರ್ಗಕ್ಕೆ ಸೇರಿಸ ಬೇಕೆಂದು ಸರ್ಕಾರ ಪ್ರಯತ್ನ ಮಾಡುತ್ತದೆಂದು ಆಗಲೇ ಹೇಳಿದ್ದೇನೆ.

ಶ್ರೀ ಎಸ್ ಎಸ್. ಆರಕೇರಿ.—ಹಾವನೂರ್‌ರವರ ವರದಿಯ ಆಧಾರದ ಮೇಲೆ ಬ್ಯಾಕ್‌ವರ್ಡ್ ಕ್ಲಾಸಸ್ ಇಲಾಖೆಯನ್ನು ಸ್ಥಾಪನೆ ಮಾಡಿದ್ದಾರೆ ಮತ್ತು ಅನೇಕ ಹಾಸ್ಟಲುಗಳನ್ನು ತೆರೆದಿದ್ದಾರೆ, ಜೊತೆಗೆ ಹಿಂದುಳಿದ ವಿದ್ಯಾರ್ಥಿಗಳಿಗೆ ತಿಂಗಳಿಗೆ ೧೨೫ ರೂಪಾಯಿಗಳಂತೆ ಕೊಡುತ್ತಿದ್ದಾರೆ. Whereas the Scheduled Castes and Tribes students are not given higher stipends. I would like to know from the Government why such discrimination is being made in respect of SC/STs ?

ಶ್ರೀಮತಿ ಮನೋರಮ ಮಧ್ವರಾಜ್.—ಇದಕ್ಕೆ ಬೇರೆ ಪ್ರಶ್ನೆ ಹಾಕಬೇಕಾಗುತ್ತದೆ.

ಶ್ರೀ ಜಿ. ಎಸ್. ಶಿವಣ್ಣಪ್ಪ —ಈ ವಿಷಯದಲ್ಲಿ ಹಾವನೂರ್‌ರವರ ವರದಿ ಹೈಕೋರ್ಟ್ ಮುಂದೆ ಹೋದಾಗ, ಕೆಲವು ಜಾತಿಗಳನ್ನು ಏನು ಹಿಂದುಳಿದವು ಎಂದು ಮಾಡಿದ್ದೀರಿ ಅದು ತಪ್ಪಾಗಿದೆ ಎಂದು ತೀರ್ಮಾನ ಕೊಟ್ಟಿದ್ದಾರೆ. ಆದ್ದರಿಂದ, ಅದನ್ನು ಸರಿಪಡಿಸಲಿಕ್ಕೆ ಏನು ಕಾರ್ಯಕ್ರಮ ಹಾಕಿ ಕೊಳ್ಳುತ್ತೀರಿ ? ಮಾನ್ಯ ರಂಗನಾಥ್‌ರವರು ಹೇಳಿದ ಪ್ರಕಾರ ರಾಷ್ಟ್ರವನ್ನು ಉದ್ಧಾರಮಾಡಬೇಕಾದರೆ ಎಲ್ಲರನ್ನೂ ಮುಂದುವರಿಸಬೇಕಾದುದು ಸರ್ಕಾರದ ಕರ್ತವ್ಯ ಹಿಂದುಳಿದ ಜನಾಂಗವನ್ನು ತೆಗೆದುಕೊಂಡು ಹೋಗಿ ಹರಿಜನ-ಗಿರಿಜನರೆಂದು ಮಾಡುವುದು—ಇದೆಲ್ಲ ಸರ್ಕಾರದ ನೀತಿಯೇ ? ಎಲ್ಲರನ್ನೂ ಹರಿಜನ-ಗಿರಿಜನರೆಂದು ಮಾಡಬೇಕೆಂದು ಏನಾದರೂ ಇದೆಯೆ ?

ಶ್ರೀಮತಿ ಮನೋರಮ ಮಧ್ವರಾಜ್.—ಹಾಗೆ ಏನು ಇಲ್ಲ. ಹೈಕೋರ್ಟಿನವರು ಏನು ತೀರ್ಮಾನವನ್ನು ಕೊಟ್ಟಿದ್ದಾರೆ ಅದರಂತೆ ನಾವು ನಡೆಯಬೇಕಾಗುತ್ತದೆ.

ಶ್ರೀ ಜಿ. ಕೆ. ತಿಕ್ಕೇಡ್—ಹಾವನೂರ್ ಆಯೋಗದ ವರದಿಯ ಪ್ರಕಾರ ಹಾಗೂ ಸೇವಾ ನಿಯಮಾವಳಿಗಳ ಪ್ರಕಾರ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಕಾರ್ಯದಲ್ಲಿ ಮಾತ್ರ. ಹರಿಜನ-ಗಿರಿಜನರನ್ನು,

ಹಿಂದುಳಿದವರನ್ನು ವಿಶೇಷ ವರ್ಗದವರನ್ನು ಎಷ್ಟೆಷ್ಟು ತೆಗೆದುಕೊಳ್ಳಬೇಕಾಗಿತ್ತೊ ಅಷ್ಟನ್ನು ತೆಗೆದು ಕೊಳ್ಳದಿರುವುದು ಆಯ್ಕೆ ಸಮಿತಿಗಳಲ್ಲಿ ಕಂಡುಬಂದಿದೆ. ಆದ್ದರಿಂದ, ಈ ಸಂದರ್ಭದಲ್ಲಿ ಸರ್ಕಾರ ಸ್ಪಷ್ಟವಾಗಿ ಹೇಳಬೇಕು, ಹಾವನೂರ್ ವರದಿಯ ಪ್ರಕಾರ ಆಯ್ಕೆ ಮಾಡಬೇಕೆಂದು ಸರ್ಕಾರ ಸೂಚನೆ ನೀಡಿದೆಯೋ ಇಲ್ಲವೋ ?

ಶ್ರೀಮತಿ ಮನೋರಮಾ ಮಧ್ವರಾಜ್ —ಸರ್ಕಾರದ ಆದೇಶದ ಪ್ರಕಾರ ಅದನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್. ಗಂಗಾಧರನ್ —ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ, ಆರ್ಥಿಕವಾಗಿ ಹಿಂದುಳಿದವರನ್ನು ಪರಿಗಣನೆ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಆದರೆ ತಾವು ಆರ್ಥಿಕವಾಗಿ ಹಿಂದುಳಿದವರಿಗೆ ಆಧ್ಯತೆ ಕೊಡುವುದಿಲ್ಲವೆಂದು ಉತ್ತರಿಸಿದ್ದೀರಿ. ಆದ್ದರಿಂದ, ಈಗಲಾದರೂ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಆರ್ಥಿಕವಾಗಿ ಹಿಂದುಳಿದವರಿಗೂ ಸಹ ಸಹಾಯ ಮಾಡುವ ರೀತಿಯಲ್ಲಿ ವರದಿಯನ್ನು ರೂಪಿಸಲು ಪ್ರಯತ್ನಿಸುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಆನಂದರಾಯರು ಎಲ್ಲಾ ಜಾತಿಯನ್ನು ಬ್ರಾಹ್ಮಣ ಜಾತಿ ಎಂದು ಪರಿಗಣಿಸುತ್ತೀರಾ ಎಂದು ಕೇಳಿದರು. ಅವರು ಹಿಂದೆ ಎಲ್ಲರನ್ನೂ ಬಾಹ್ಮಣರನ್ನಾಗಿ ಮಾಡಬೇಕು ಎಂದು ವಿರೋಧಪಕ್ಷದಿಂದ ಆಡಳಿತ ಪಕ್ಷಕ್ಕೆ ಬಂದಿದ್ದರು. ಅದು ನಡೆಯಲಿಲ್ಲ. ಆದಕ್ಕೆ ಪುನಃ ವಾಪಸ್ ಆ ಕಡೆ ಹೋಗಿದ್ದಾರೆ. ಅವರು ಮತ್ತೆ ಏನಾದರೂ ಈ ಕಡೆ ಬಂದಾಗ ತಮ್ಮ ವಿಷಯವನ್ನು ಯೋಚನೆ ಮಾಡಲಿ. ಈಗ ಸದ್ಯಕ್ಕೆ ಅದು ಬೇಡ.

ಶ್ರೀ ಮಳ್ಳೂರು ಆನಂದರಾವ್. —ನಾನು ಆ ಕಡೆ ಬಂದರೆ ಎಲ್ಲಾ ಜಾತಿಗಳನ್ನೂ ಮುಂದುವರಿದ ಜನಾಂಗ ಎಂದು ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಈಗ ನಿಮ್ಮ ಅವಶ್ಯಕತೆ ಇಲ್ಲ. ಅಂಥ ಕಾಲ ಬಂದಾಗ ನೋಡೋಣ.

Selection of Primary School Teachers in Education Department.

195. SRI PRABHAKAR KOTEKAR (Chaittapur).—Will the Minister for Education be pleased to state—

(*a*) whether the District Level Recruitment Committees, with non-official members, for appointing teachers under the Education Department have been dissolved,

(*b*) if so, the reasons for the same,

(*c*) whether the Government has consitituted new Committees in place of D.L.R.Cs, with only Government Officials as its members,

(*d*) if so, whether these new D. L. R. Cs. with only Government Officials have selected teachers (particulars of selection in each District be furnished) :

(*e*) whether the Government is constituing the new D. L. R. Cs. with only Government Officials in future also ?

SRI G. B. SHANKARA RAO (Minister for Education).—

(*a*) No

(*b*) Does not arise in view of the answer to (*a*).